# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 382 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 21.12.2022. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಸರ್ಕಾರ ಹೊಸದಾಗಿ ಸೃಜಿಸಿರುವ ಕಂದಾಯ ಗ್ರಾಮ ವೃತ್ತಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರ ಸಂಖ್ಯೆ ಎಷ್ಟು; ಮತ್ತು ಇವರುಗಳಿಗೆ ಎಷ್ಟು ತಿಂಗಳು/ವರ್ಷಗಳಿಂದ ಮಾಸಿಕ ಗೌರವ ಧನ ಬಿಡುಗಡೆ ಮಾಡಿರುವುದಿಲ್ಲ; ಸದರಿಯವರಿಗೆ ಇದುವರೆಗೆ ಮಾಸಿಕ ಗೌರವ ಧನ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿ ಗ್ರಾಮ ಆಡಳಿತಾಧಿಕಾರಿ ಹುದ್ದೆಗೆ ಸಾರ್ವಜನಿಕ ಕೆಲಸ ಕಾರ್ಯಗಳ ನಿರ್ವಹಣೆಯಲ್ಲಿ ಸಹಾಯಕ್ಕಾಗಿ ಒಬ್ಬ ಗ್ರಾಮ ಸಹಾಯಕರನ್ನು ಮಿತ ವೇತನದ ಆಧಾರದ ಮೇಲೆ ನೇಮಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಅದರಂತೆ ರಾಜ್ಯದಲ್ಲಿ ಒಟ್ಟು 10,450 ಗ್ರಾಮ ಸಹಾಯಕರು ಕರ್ತವ್ಯ ನಿರ್ವಹಿಸುತ್ತಿದ್ದು, ಆಯವ್ಯಯದ ಪ್ರತಿ ತ್ರೈಮಾಸಿಕ ಕಂತಿನಂತೆ ಅನುದಾನ ಬಿಡುಗಡೆಗೊಳಿಸಲಾಗುತ್ತಿದೆ.<br><br>ಗ್ರಾಮ ಸಹಾಯಕರುಗಳಿಗೆ ಮಾಸಿಕ ವೇತನ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ. | ರಾಜ್ಯದ ಕಂದಾಯ ಇಲಾಖೆಯಲ್ಲಿ ಹೊಸದಾಗಿ ಸೃಜಿಸಿರುವ ಕಂದಾಯ ಗ್ರಾಮ ವೃತ್ತಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಸಹಾಯಕರಿಗೆ ಇದುವರೆಗೂ ನೇಮಕಾತಿ ಆದೇಶ ಹೊರಡಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ನೇಮಕಾತಿ ಆದೇಶ ಹೊರಡಿಸದಿರಲು ಕಾರಣಗಳೇನು? (ತಾಲ್ಲೂಕು, ಗ್ರಾಮ, ವೃತ್ತವಾರು ಮಾಹಿತಿ ನೀಡುವುದು) | ಗ್ರಾಮ ಸಹಾಯಕರುಗಳಿಗೆ ನೇಮಕಾತಿ ಆದೇಶ ಹೊರಡಿಸುವ ಮೊದಲಿಗೆ ಅವರುಗಳಿಗೆ ಮಿತ ವೇತನ ಪಾವತಿಸುವ ಕುರಿತು ಅನುದಾನದ ಅವಶ್ಯಕತೆ ಇರುವ ಕಾರಣ ಈ ಹುದ್ದೆಗಳನ್ನು ಭರ್ತಿ ಮಾಡುವ ಮೊದಲಿಗೆ ಆರ್ಥಿಕ ಇಲಾಖೆಯ ಅನುಮೋದನೆ ಪಡೆದು ತದನಂತರವೇ ಗ್ರಾಮ ಸಹಾಯಕರನ್ನು ನೇಮಕಾತಿ ಮಾಡಿಕೊಳ್ಳಲು ಕ್ಷೇತ್ರ ಇಲಾಖೆಗಳಿಗೆ ಅನುಮೋದನೆ ನೀಡಬೇಕಾಗುತ್ತದೆ. ಅಲ್ಲಿಯವರೆಗೆ ನೇಮಕಾತಿ ಆದೇಶ ಹೊರಡಿಸಲು ಅವಕಾಶವಿರುವುದಿಲ್ಲ.<br><br>ಆಯಾ ವೃತ್ತಗಳಲ್ಲಿ ಖಾಲಿಯಿರುವ ಗ್ರಾಮ ಸಹಾಯಕ ಹುದ್ದೆಗಳಿಗೆ ಅನುಗುಣವಾಗಿ ಕಾಲಕಾಲಕ್ಕೆ ಭರ್ತಿ ಮಾಡಲು ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ. |
| ಇ. | ಹೊಸದಾಗಿ ಸೃಜಿಸಿರುವ ಕಂದಾಯ ಗ್ರಾಮ ವೃತ್ತಗಳಲ್ಲಿ ಜಿಲ್ಲಾಧಿಕಾರಿಗಳು ಗ್ರಾಮ ಸಹಾಯಕರನ್ನು ನೇಮಕಾತಿ ಮಾಡಿಕೊಳ್ಳುವಂತೆ ಹಲವಾರು ಬಾರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದರೂ ಸಹ ಸರ್ಕಾರ ಇದೂವರೆಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು; (ಮಾಹಿತಿ ನೀಡುವುದು) | |
| ಈ. | ಸರ್ಕಾರ ಯಾವ ಕಾಲಮಿತಿಯೊಳಗೆ ಕೆಳಹಂತದ ಗ್ರಾಮ ಸಹಾಯಕರಿಗೆ ಮಾಸಿಕ ಗೌರವ ಧನ ಹಾಗೂ ನೇಮಕಾತಿ ಆದೇಶ ನೀಡಲಾಗುವುದು? (ಸಂಪೂರ್ಣ ವಿವರ ಮಾಹಿತಿ ನೀಡುವುದು) | |

**ಸಂಖ್ಯೆ: ಕಂಇ 294 ಬಿಎಸ್ಐ 2022.**

( ಆರ್.ಅಶೋಕ )
ಕಂದಾಯ ಸಚಿವರು